# ವಾರ್ತಾ ವಿಶ್ಲೇಷಣೆ

## ಭಾರತೀಯ ವಿಜ್ಞಾನ

ವಿಜ್ಞಾನವೆಂದ ಕೂಡಲೇ ಪಶ್ಚಿಮ ದೇಶಗಳ ಕಡೆ ತಿರುಗುವ ವಾಡಿಕೆ ನಮಗೆ. ಪಶ್ಚಿಮದೇಶಗಳು ಸಾಧಿಸಿದ ಮತ್ತು ಸಾಧಿಸುತ್ತಿರುವ ಅದ್ಭುತ ವೈಜ್ಞಾನಿಕ ಮತ್ತು ತಾಂತ್ರಿಕ ಸಾಧನೆಗಳು ನಮ್ಮ ಬಗ್ಗೆ ಒಂದು ರೀತಿಯ ಕೀಳರಿಮೆಯುಂಟಾಗುವಂತೆ ಮಾಡಿವೆ. ನಮ್ಮ ದೇಶದ ಸಾಂಸ್ಕೃತಿಕ ಹಿರಿಮೆಯನ್ನೂ ಹಿಂದೆ ಸಾಧಿಸಿದ ವೈಜ್ಞಾನಿಕ ಮುನ್ನಡೆಯನ್ನೂ ನಾವು ಮರೆತು, ಇಂದಿನ ಅವನತಿಯ ಸ್ಥಿತಿಯೇ ನಮ್ಮ ಯಾವತ್ತೂ ಸ್ಥಿತಿ ಎಂದು ಭ್ರಮಿಸಿ, ಪ್ರತಿಯೊಂದಕ್ಕೂ ಪಶ್ಚಿಮದ ಕಡೆ ತಿರುಗಿ ನೋಡುವ ಒಂದು ಅಸಹಾಯಕ ಜನಾಂಗ ನಾವಾಗಿದ್ದೇವೆ. ನಾವು ಯಾತಕ್ಕೂ ಬಾರದವರು ಎಂಬ ಭ್ರಮೆಯನ್ನು ದೃಢಪಡಿಸುವ ಭಾರತೀಯ ಬುದ್ಧಿಜೀವಿಗಳ ಸಂಖ್ಯೆ ಅಪಾರವೆಂದೇ ಹೇಳಬೇಕು. ಸ್ವಾಮಿ ವಿವೇಕಾನಂದರು ಹೇಳುತ್ತಾರೆ: "ಇಂದು ಮನುಷ್ಯ ಪಾಶ್ಚಾತ್ಯಜ್ಞಾನಪಾನದಿಂದ ಮತ್ತನಾಗಿ ತನಗೆಲ್ಲ ಗೊತ್ತು ಎಂದು ಬೀಗುತ್ತಾನೆ. ಅವನು ನಮ್ಮ ಪುರಾತನ ಋಷಿಗಳನ್ನು ಅಪಹಾಸ್ಯ ಮಾಡುತ್ತಾನೆ. ಹಿಂದೂ ಚಿಂತನೆಗಳೆಲ್ಲವೂ ಅವನ ಪಾಲಿಗೆ ಕಸಕ್ಕೆ ಸಮಾನ, ಭಾರತೀಯ ದರ್ಶನಗಳೆಲ್ಲ ಮಕ್ಕಳಾಟ ಮತ್ತು ಧರ್ಮ ಮೂರ್ಖರ ಮೂಢನಂಬಿಕೆಗಳು."

ಆದರೆ ಇದಕ್ಕೆ ಅಪವಾದವಾಗಿ ಭಾರತೀಯತೆಯನ್ನು ಎತ್ತಿಹಿಡಿಯುವ ಕೆಲವು ಪ್ರಜ್ಞಾವಂತರು ಅಲ್ಲಲ್ಲಿ ಮಿನುಗುತ್ತಾರೆ. ಅಂಥವರಲ್ಲಿ ಒಬ್ಬರು ಗಾಂಧೀವಾದಿಗಳಾದ ಧರ್ಮಪಾಲರು. ಅವರು ಭಾರತೀಯ ವಿಜ್ಞಾನದ ಪುನರಾವಿಷ್ಕಾರಕ್ಕೆ ಪ್ರಸಿದ್ಧರು. ದೇಶೀಯ ವೈಜ್ಞಾನಿಕ ಸಂಪ್ರದಾಯ ಮತ್ತು ಸಂಸ್ಕೃತಿಗಳಲ್ಲಿ ನೂತನ ಶ್ರದ್ಧೆಯು ಭಾರತೀಯರಲ್ಲಿ ಮೂಡಲು ಅವರ ಕೃತಿಗಳ ಕೊಡುಗೆ ಅಪೂರ್ವವಾದುದು. ಈ ನಿಟ್ಟಿನಲ್ಲಿ ಅವರು ನಡೆಸಿದ ಪ್ರಶಂಸನೀಯ ಸಂಶೋಧನೆಗಳಿಗಾಗಿ ಗೌರವಾನ್ವಿತ ಇನ್‌ಫಿನಿಟಿ ಫೌಂಡೇಷನ್ (Infinity Foundation) ಎಂಬ ಪ್ರಶಸ್ತಿಯನ್ನು ಅವರಿಗಿತ್ತು ಪುರಸ್ಕರಿಸಲಾಯಿತು. ಅವರ ಅಭಿಪ್ರಾಯದಂತೆ, ಭಾರತವು ವಸಾಹತು ದೇಶವಾಗುವುದಕ್ಕೆ ಮುಂಚೆ ಇಲ್ಲಿಯ ಕೃಷಿಯ ಉತ್ಪನ್ನ ಯೂರೋಪಿಗಿಂತ ಅಧಿಕವಾಗಿತ್ತು ಮತ್ತು ವಿಜ್ಞಾನದಲ್ಲಿ ಅದರ ಸಾಧನೆ ಗಮನಾರ್ಹವಾಗಿತ್ತು.

ಸರ್ ಮೋನಿಯರ್ ವಿಲಿಯಮ್ಸ್ ಹೇಳಿರುವ ಮಾತನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು: "ಸ್ಪಿನೋಜಾ ಹುಟ್ಟುವುದಕ್ಕೆ ೩,೦೦೦ ವರ್ಷಗಳಿಗೆ ಮೊದಲೇ ಹಿಂದೂಗಳು ಸ್ಪಿನೋಜಿಗಳಾಗಿದ್ದರು; ಡಾರ್ವಿನ್ ಹುಟ್ಟುವುದಕ್ಕೆ ಹಲವು ಶತಮಾನಗಳ ಮುಂಚೆಯೇ ಅವರು ಡಾರ್ವಿನೀಯನ್ನರಾಗಿದ್ದರು ಮತ್ತು ನಮ್ಮ ಕಾಲದ ಹಕ್ಸ್ಲೇಗಳು ವಿಕಾಸವಾದವನ್ನು ಸ್ವೀಕರಿಸುವುದಕ್ಕೆ ಹಲವು ಶತಮಾನಗಳ ಮುಂಚೆಯೇ ಹಾಗೂ Evolution (ವಿಕಾಸವಾದ) ಎಂಬರ್ಥದ ಪದ ಪ್ರಪಂಚದ ಯಾವುದೇ ಭಾಷೆಯಲ್ಲಿ ಅಸ್ತಿತ್ವಕ್ಕೆ ಬರುವುದಕ್ಕೆ ಬಹಳ ಮುಂಚೆಯೇ ಹಿಂದೂಗಳು ವಿಕಾಸವಾದಿಗಳಾಗಿದ್ದರು."

ಭಾರತದ ವೈಜ್ಞಾನಿಕ ಕೊಡುಗೆಯ ಕಡೆ ಯುವಕರ ಗಮನವನ್ನು ಸೆಳೆಯುವ ಮಹತ್ ಕಾರ್ಯವನ್ನು ಮಾಡುತ್ತಿರುವವರು ತಮಿಳುನಾಡಿನ ಡಾ. ಎನ್. ಗೋಪಾಲಕೃಷ್ಣನ್ ಅವರು. ಅವರು ಈಗಾಗಲೇ ವಿವಿಧ ಶಿಕ್ಷಣಸಂಸ್ಥೆಗಳ ವಿದ್ಯಾರ್ಥಿಗಳನ್ನು ಉದ್ದೇಶಿಸಿ ೪೦೦೦ಕ್ಕೂ ಹೆಚ್ಚು ಉಪನ್ಯಾಸಗಳನ್ನು ನೀಡಿದ್ದಾರೆಂದರೆ ಯುವ ವಿದ್ಯಾರ್ಥಿಗಳು ಎಷ್ಟರ ಮಟ್ಟಿಗೆ ಅವರ ವಿಚಾರಗಳಿಗೆ ಸ್ಪಂದಿಸುತ್ತಿದ್ದಾರೆಂಬುದು ತಿಳಿದು ಬರುತ್ತದೆ. ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈಂಟಿಫಿಕ್ ಹೆರಿಟೇಜ್ (IISH) ಎಂಬ ಸಂಸ್ಥೆಯನ್ನೂ ಅವರು ಪ್ರಾರಂಭಿಸಿದ್ದಾರೆ. ಈ ರೀತಿ ಭಾರತದ ಬಗ್ಗೆ ಯುವಕರಲ್ಲಿ ಅಭಿಮಾನವನ್ನು ಮೂಡಿಸುತ್ತಿರುವ ಅವರ ಸಾಧನೆ ಸ್ತುತ್ಯರ್ಹ. ◆

## ಯುವಕರಲ್ಲಿ ಧರ್ಮೋತ್ಸಾಹ

ಸಾಮಾನ್ಯವಾಗಿ ಧಾರ್ಮಿಕ ಸಭೆ ಸಮಾರಂಭಗಳಲ್ಲಿ, ಉಪನ್ಯಾಸಗಳಲ್ಲಿ, ಆಶ್ರಮಗಳು ನಡೆಸುವ ಆಧ್ಯಾತ್ಮಿಕ ಶಿಬಿರ ಮತ್ತು ಭಕ್ತಸಮ್ಮೇಳನಗಳಲ್ಲಿ ಹೆಚ್ಚಾಗಿ ಭಾಗವಹಿಸುವವರು ತಾರುಣ್ಯದ ಉತ್ಸಾಹದ ಕಾವು ನಂದಿರುವ ಮಧ್ಯವಯಸ್ಕರು, ಅರವತ್ತರ ಅರಳುಮರುಳು ಎನಿಸಿಕೊಂಡವರು ಮತ್ತು **ಅಂಗಂ ಗಲಿತಂ ಫಲಿತಂ ಮುಂಡಂ ದಶನವಿಹೀನಂ ಜಾತಂ ತುಂಡಂ । ವೃದ್ಧೋ ಯಾತಿ ಗೃಹೀತ್ವಾ ದಂಡಂ** ॥ ಎಂಬ ಸ್ಥಿತಿಯಲ್ಲಿರುವವರು. ವೀರ್ಯೋತ್ಸಾಹದಿಂದ ತುಂಬಿ ತುಳುಕುವ ಯುವಕರು ಎಲ್ಲೋ ಮಧ್ಯ ಮಧ್ಯದಲ್ಲಿ ಮಿನುಗುತ್ತಾರೆ ಅಷ್ಟೇ. ವಾರ್ಧಕ್ಯದ ಕಾರ್ಮೋಡದ ಮಧ್ಯೆ ಅವರ ಉತ್ಸಾಹದ ಕಾಂತಿ ಕುಂದಿರುತ್ತದೆ.

ಇಂತಹ ಸನ್ನಿವೇಶದಲ್ಲಿ, ಅಮೇರಿಕದಲ್ಲಿ, ಭಾರತೀಯ ಯುವಕರೆಲ್ಲ ಸೇರಿ ಅತ್ಯಂತ ವ್ಯವಸ್ಥಿತ ರೀತಿಯಲ್ಲಿ Global Dharma Conference ಒಂದನ್ನು ಮೂರು ದಿವಸಗಳು ನಡೆಸಿದರೆಂಬುದು ಆಶ್ಚರ್ಯದ ಸಂಗತಿಯಲ್ಲವೆ! ೨೦೦೩, ಜುಲೈ ೨೫ರಿಂದ ೨೭ರವರೆಗೆ ನ್ಯೂಜೆರ್ಸಿಯ ಎಡಿಸನ್ ಎಂಬ ಊರಿನಲ್ಲಿ ಈ ಸಮ್ಮೇಳನ ನಡೆಯಿತು. ಕೆಲವು ಸಾವಿರ ಯುವ ಪ್ರತಿನಿಧಿಗಳು ಉತ್ತರ ಅಮೇರಿಕ ದೇಶಗಳಿಂದ ಮಾತ್ರವಲ್ಲದೆ ಬೇರೆ ದೇಶಗಳಿಂದಲೂ ಬಂದಿದ್ದರು. ವಿವಿಧ ಕಾರ್ಯಾಗಾರಗಳು, ವಿಚಾರಗೋಷ್ಠಿ, ವಸ್ತುಪ್ರದರ್ಶನಗಳು, ಸಾಂಸ್ಕೃತಿಕ ಹಾಗೂ ಆಧ್ಯಾತ್ಮಿಕ ಚಟುವಟಿಕೆಗಳು—ಇವು ಸಮ್ಮೇಳನದ ವಿಶೇಷ ಆಕರ್ಷಣೆಗಳಾಗಿದ್ದವು. ಸ್ವಾಮಿ ದಯಾನಂದ ಸರಸ್ವತಿ, ಡೇವಿಡ್ ಫ್ರಾಲೀ, ದೀಪಕ್ ಛೋಪ್ರಾ, ಕಿರಣ್ ಬೇಡಿ, ಡಾ.ಮುರಳೀಮನೋಹರ ಜೋಷಿ ಮುಂತಾದ ಅಂತಾರಾಷ್ಟ್ರೀಯ ಖ್ಯಾತನಾಮರು ಈ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಸಮ್ಮೇಳನದ ಪ್ರಾರಂಭೋತ್ಸವದ ಸಂದರ್ಭದಲ್ಲಿ ನ್ಯೂಜೆರ್ಸಿಯ ಗವರ್ನರ್ ಎಂ.ಸಿ.ಗ್ರೀವಿ "ಧರ್ಮ ಮತ್ತು ಮಾನವೀಯ ಮೌಲ್ಯಗಳು" ಎಂಬ ವಿಷಯದ ಮೇಲೆ ಅತ್ಯಂತ ಸ್ಫೂರ್ತಿದಾಯಕವಾಗಿಯೂ ವಿಚಾರಪೂರ್ಣವಾಗಿಯೂ ಮಾತನಾಡಿದರು. ಕೊನೆಯ ದಿನ ಭಾರತದ ಅಧ್ಯಕ್ಷ ಡಾ. ಅಬ್ದುಲ್ ಕಲಾಮ್ ಕೂಡ ವಿಡಿಯೋ ಕಾನ್‌ಫರೆನ್ಸ್ ಮೂಲಕ ಸಮ್ಮೇಳನವನ್ನುದ್ದೇಶಿಸಿ ಮಾತನಾಡಿದರು. "ಮುಂದೆ ಇಂತಹ ಸಮ್ಮೇಳನ ಯಾವಾಗ?" ಎಂದು ಪ್ರತಿನಿಧಿಗಳು ತುಂಬ ಉತ್ಸಾಹದಿಂದ ಕೇಳುವಷ್ಟರ ಮಟ್ಟಿಗೆ ಅದು ಯಶಸ್ವಿಯಾಗಿತ್ತು. ಈ ಯುವ ಸಂಘಟನೆಯ ಕೇಂದ್ರಬಿಂದು ಕಾಂಚನ ಬ್ಯಾನರ್ಜಿಯವರು. ◆